**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 62K– ತೃತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** | **ಸಮಯ : 03.00 ಗಂಟೆಗಳು**

***************************************************************************************

**ಅಭ್ಯಾಸ ಪತ್ರಿಕೆ–2**

***************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8x1=8**

1. 'ನದಿ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ
   - ಎ) ರೂಢನಾಮ ಬಿ) ಅಂಕಿತನಾಮ
   - ಸಿ) ಅನ್ವರ್ಥಕನಾಮ ಡಿ) ಸರ್ವನಾಮ
2. ಕೆಳಗಿನವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಪದ
   - ಎ) ವಸ್ತು ಬಿ) ಆಸಕ್ತಿ
   - ಸಿ) ಧ್ವನಿ ಡಿ) ಅಮ್ಮ
3. ಪ್ರಕೃತಿಯಲ್ಲಿ ಅಪಾರವಾದ ವೈವಿಧ್ಯತೆ ಇದ್ದರೂ ಒಳಗೆ ಸಾಮರಸ್ಯವು ಇರುವಂತೆ – ಇಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದಕೂಡಿರುವ ಪದ
   - ಎ) ಸಾಮರಸ್ಯವು ಬಿ) ಪ್ರಕೃತಿಯಲ್ಲಿ
   - ಸಿ) ಅಪಾರವಾದ ಡಿ) ಇರುವಂತೆ
4. "ಜೇನಿನಂತೆ ಸಿಹಿ" ಇಲ್ಲಿರುವ ಅಲಂಕಾರ
   - ಎ) ಉಪಮ ಬಿ) ರೂಪಕ
   - ಸಿ) ಯಮಕ ಡಿ) ದೃಷ್ಟಾಂತ
5. ಕೆಳಗಿನವುಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆ
   - ಎ) ಸದ್ಗುರು ಬಿ) ಜೀವವೊಂದು
   - ಸಿ) ವಿದ್ಯಾಭ್ಯಾಸ ಡಿ) ಊರೂರು
6. 'ಅಭಿಪ್ರಾಯದ ವಿವರಣೆ ಇಂತಿದೆ' ಎಂದು ತಿಳಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ
   - ಎ) ವಿವರಣಾತ್ಮಕ ಬಿ) ಪ್ರಶ್ನಾರ್ಥಕ
   - ಸಿ) ಭಾವಸೂಚಕ ಡಿ) ಅಲ್ಪವಿರಾಮ
7. ಕೆಳಗಿನವುಗಳಲ್ಲಿ ಅಂಶೀ ಸಮಾಸ ಪದ
   - ಎ) ಮುಂಗೈ ಬಿ) ಇಂಚರ
   - ಸಿ) ಅರಮನೆ ಡಿ) ಇಬ್ಭಾಗ
8. ಧಗಧಗನೆ ಉರಿಯುತ್ತಿರುವ ಕಾಡ್ಗಿಚ್ಚಿಗೆ ಪ್ರಾಣಿಗಳು ಭಯದಿಂದ ಚೀರಿಚೀರಿ **ಓಡೋಡಿ** ಹೋದವು – ಈ ವಾಕ್ಯದಲ್ಲಿ ಬಂದಿರುವ ದ್ವಿರುಕ್ತಿ ಪದ
   - ಎ) ಧಗಧಗನೆ ಬಿ) ಚೀರಿಚೀರಿ
   - ಸಿ) ಕಾಡ್ಗಿಚ್ಚಿಗೆ ಡಿ) **ಓಡೋಡಿ**

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ: 4x1=4**

9. ಶಿಶುನಾಳದ ಸಂತ : ಶರೀಫರು :: ಹುಲಗೂರಿನ ಸಂತ : ----------------------
10. ಶಿವಾಜಿಯ ಮಗ : ರಾಜಾರಾಮ :: ಬೆಳವಡಿ ಮಲ್ಲಮ್ಮಾಜಿಯ ಮಗ : -------------

11. ಕರದಲಿ : ಜಪಮಣಿ :: ಬಾಯಲಿ : ------------------------------

12. ಅಪ್ಪರಿಲ್ಲದೆ ಸೊಪ್ಪಾದೊ : ಈ ಭೂಮಿ :: ಸಪ್ಪೆ ದಂಟಾದೊ : -------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4x1=4**

13. ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು?
14. ಸತೀಶ ಕುಲಕರ್ಣಿಯವರು ಯಾವ ಮನಸ್ಸುಗಳನ್ನು ಕಟ್ಟುತ್ತೇವೆಂದು ಹೇಳುತ್ತಾರೆ?
15. ಬಸ್ ಪ್ರಯಾಣದ ವೇಳೆ ಲೇಖಕರಿಗೆ ನೆನಪಿಗೆ ಬಂದ ಕಾವ್ಯಾನಂದರ ಪದ್ಯದ ಸಾಲುಗಳು ಯಾವುವು?
16. ಪುಲಿಗೆರೆ ಸೋಮನಾಥನ ಅಂಕಿತ ಯಾವುದು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8x2=16**

17. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗೆಯನ್ನು ಕುರಿತು ಬರೆಯಿರಿ.
18. ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನು ಬೀರಲಿಲ್ಲ, ಏಕೆ?
19. ಬೀಚಿಯವರು ಯಾವುದಾದರೂ ಒಂದು ಕನ್ನಡ ಕತೆ ಪುಸ್ತಕವನ್ನು ಕೊಡುವಂತೆ ಗೋವಿಂದರಾಯರನ್ನು ಏಕೆ ಕೇಳಿದರು?
20. ಕೆಳದಿಯ ಚೆನ್ನಮ್ಮನು ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಲು ಕಾರಣವೇನು? ವಿವರಿಸಿರಿ.
21. ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟ 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?
22. ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ?
23. ಗ್ರಂಥಾಲಯವನ್ನು ಹೊಕ್ಕಾಗ ಸಿ.ಪಿ.ಕೆ. ಅವರಿಗಾದ ಅನುಭವವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.
24. ಶಿಲ್ಪಿಯು ಧರ್ಮಪದನಿಗೆ ವಿಷ ಉಣಿಸಲು ಕಾರಣವೇನು?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2x3=6**

25 "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ"

26. "ಪಾರ್ಥನೊಲು ತತ್ತರಿಸಿ ವಿಸ್ಮಿತನಾಗಿ".

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4x3=12**

27. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.
28. ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ವಿವರಿಸಿರಿ.
29. 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.
30. ಪುರಂದರದಾಸರು ಕಪಟ ಭಕ್ತಿಯ ಆರಾಧಕರನ್ನು ಅಣಕಿಸಿ ಅವಹೇಳನ ಮಾಡಿರುವ ಬಗೆಯನ್ನು ನೀವು ಏಕೆ ಮೆಚ್ಚುತ್ತೀರಿ? ವಿವರಿಸಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ: 2x3=6**

31. ಮ.ನ.ಮುಕ್ತಾಯಿ
32. ಬಸವಣ್ಣ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ: 1x 3=3**

33. "ಶಕ್ತಿಗಿಂತ ಯುಕ್ತಿ ಮೇಲು"

ಅಥವಾ

"ಬೆಳೆಯುವ ಪೈರು ಮೊಳಕೆಯಲ್ಲಿ"

**IX. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1x4=4**

34. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು? ವಿವರಿಸಿರಿ.

**ಅಥವಾ**

ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ: 1x 4=4**

35. ನಾವು ------------------------------------------
------------------------------------------
------------------------------------------
------------------------------------- ಇಂದೆ

**ಅಥವಾ**

ಕರ್ನಾಟಕ ------------------------------------
------------------------------------------
------------------------------------------
------------------------------------- ಒಂದೆ

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ: 4x1=4**

ಪವಾಡ, ಮೂಢನಂಬಿಕೆ, ಮಾಟಮಂತ್ರ ಮುಂತಾದವುಗಳ ಬಗ್ಗೆ ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಚರ್ಚಿಸಬೇಕು. ಸಮಾಜದ ಮೇಲೆ ಪ್ರಭಾವ ಬೀರುತ್ತಿರುವ ಸಮಸ್ಯೆಗಳಿಂದ ವಿಜ್ಞಾನಿಗಳು ವಿಮುಖರಾಗುವುದು ಸಾಧ್ಯವಿಲ್ಲ. ವಿಜ್ಞಾನಿ ತನ್ನ ಸಂಶೋಧನೆಯ ಪರಿಧಿಯನ್ನು ವಿಸ್ತರಿಸಿಕೊಳ್ಳಬೇಕು. ಅವರ ಸಂಶೋಧನೆಗಳು ನಾಲ್ಕು ಗೋಡೆಗಳ ಮದ್ಯಕ್ಕೆ ಮಾತ್ರ ಸೀಮಿತವಾಗಿರದೆ ಜನರ ಸತ್ಯ ಜೀವನದ ಸಮಸ್ಯೆಗಳೂ ಅವರ ಸಂಶೋಧನಾ ಕ್ಷೇತ್ರವಾಗಿರಬೇಕು. ಹಲವಾರು ಅತಾರ್ಕಿಕವಾದ ನಡಾವಳಿಗಳಿಂದ ಸಮಾಜವು ಇಂದು ಅನ್ಯಾಯಕ್ಕೆ ಒಳಪಟ್ಟಿದ್ದು ಉಸಿರುಕಟ್ಟುವ ವಾತಾವರಣದಲ್ಲಿದೆ. ಅದನ್ನು ಶುದ್ಧಗೊಳಿಸುವಲ್ಲಿ ವಿಜ್ಞಾನಿಗಳು ಇನ್ನೂ ಪ್ರಯತ್ನಿಸದೇ ಇರುವುದು ಸರಿಯಲ್ಲ.

36. ಪ್ರಶ್ನೆಗಳು:

1. ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಚರ್ಚಿಸಬೇಕಾದ ಅಂಶಗಳು ಯಾವುವು?
2. ವಿಜ್ಞಾನಿಗಳು ಏನನ್ನು ವಿಸ್ತರಿಸಿಕೊಳ್ಳಬೇಕಾಗಿದೆ?
3. ವಿಜ್ಞಾನಿಗಳ ಸಂಶೋಧನಾ ಕ್ಷೇತ್ರ ಯಾವುದಾಗಬೇಕು?
4. ಸಮಾಜದಲ್ಲಿ ಉಸಿರು ಕಟ್ಟುವ ವಾತಾವರಣ ನಿರ್ಮಾಣವಾಗಲು ಕಾರಣವೇನು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ: 4x 1=4**

37. ಪರಿಸರ ಸಂರಕ್ಷಣೆ

ಅಥವಾ

ಇಂದಿನ ಶಿಕ್ಷಣದಲ್ಲಿ ಕಂಪ್ಯೂಟರಿನ ಪಾತ್ರ

**XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ: 5x1=5**

38. ನಿಮ್ಮನ್ನು ರಾಣಿಬೆನ್ನೂರಿನ ನಿವಾಸಿ ನಿಶಾಂತ್ ಎಂದು ಭಾವಿಸಿಕೊಂಡು, ವಿದ್ಯುತ್ ಸಂಪರ್ಕವನ್ನು ಕಡಿತ ಮಾಡದಂತೆ ಕೋರಿ ಕೆ.ಪಿ.ಟಿ.ಸಿ.ಎಲ್. ಸಹಾಯಕ ಇಂಜಿನಿಯರ್ ರವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಜ್ವಲ್ ಎಂದು ಭಾವಿಸಿಕೊಂಡು, ವ್ಯಾಸಂಗದ ಪ್ರಗತಿಯನ್ನು ಕುರಿತು ಬಳ್ಳಾರಿಯಲ್ಲಿರುವ ನಿಮ್ಮ ತಂದೆ ಗುರುಸ್ವಾಮಿ ಅವರಿಗೆ ಒಂದು ಪತ್ರವನ್ನು ಬರೆಯಿರಿ.

◉◉◉◉◉